ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.1261/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸೋಮಲಿಂಗಪ್ಪ** | | |
| **ತಂದೇಃಹೆಸರು** | **ಚಿದಾನಂದಪ್ಪ** | **ಪಿಡಬ್ಲೂಃ** | **2** |
| **ವಯಸ್ಸು** | **30 ವರ್ಷ** | **ಸಿಡಬ್ಲೂಃ** | **2** |
| **ಉದ್ಯೋಗಃ** | **ಕೂಲಿ** | | |
| **ವಾಸ ಸ್ಥಳಃ** | **ಬೆಳಗುರ್ಕಿ.** | | |

**ದಿನಾಂಕ 06-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 5 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ತಾಯಿ. ಚಾಸಾ-3 ರಿಂದ 7 ರವರು ನಮ್ಮ ಗ್ರಾಮಸ್ಥರು. ಚಾಸಾ-8 ನನ್ನ ತಂದೆ. 1 ನೇ ಆರೋಪಿ ನನ್ನ ಹೆಂಡತಿ. 2 & 3 ನೇ ಆರೋಪಿ ನನ್ನ ಅತ್ತೆ ಮಾವ. 4 & 5 ನೇ ಆರೋಪಿತರು 1 ನೇ ಆರೋಪಿಯ ಸಹೋದರರು.

ದಿ.29-05-2020 ರಂದು ನನ್ನ ಮತ್ತು 1 ನೇ ಆರೋಪಿಯ ಮದುವೆ ನಮ್ಮ ಮನೆಯ ಮುಂದೆ ಆಗಿರುತ್ತದೆ. ಮನೆ ಕೆಲಸದ ವಿಚಾರದಲ್ಲಿ ನನ್ನ ತಾಯಿ ಮತ್ತು 1 ನೇ ಆರೋಪಿ ನಡುವೆ ಗಲಾಟೆ ಆಗುತ್ತಿತ್ತು. ನಂತರ ಆಕೆ ನನ್ನ ಮನೆಯನ್ನು ಬಿಟ್ಟು ತನ್ನ ತವರು ಮನೆಗೆ ಹೋಗಿದ್ದಳು. 2-3 ಸಲ ನಾನು ಹೋಗಿ ಆಕೆಯನ್ನು ಕರೆದುಕೊಂಡು ಬಂದಿದ್ದೆ. 1 ನೇ ಆರೋಪಿಯ ಇಚ್ಛೆಯಂತೆ ಪ್ರತ್ಯೇಕ

ವಾಸಿಸುವ ಸಲುವಾಗಿ ಆಕೆಯನ್ನು ಬೆಂಗಳೂರಿಗೆ ಸಹ ಕರೆದುಕೊಂಡು ಹೋಗಿದ್ದೆ. ಅಲ್ಲಿಂದ ನನಗೆ ಹೇಳದೇ, ಕೇಳದೆ, ಮನೆ ಬಿಟ್ಟು ಬಂದಿರುತ್ತಾಳೆ. ತದನಂತರ ನಾನು ನಮ್ಮ ಊರಿನ 3 ಜನ ಹಿರಿಯರಾದ ಕರಿಯಪ್ಪ, ಅಯ್ಯಪ್ಪ ಮತ್ತು ಬಸವರಾಜರೆಡ್ಡಿರವರನ್ನು ಕರೆದುಕೊಂಡು ಅವರ ಮನೆಗೆ ಹೋಗಿದ್ದೆ. ಆಗ 1ನೇ ಆರೋಪಿಯನ್ನು ಕರೆದರೆ ಆಕೆ ನನ್ನ ಜೊತೆಗೆ ಬರುವುದಿಲ್ಲ, ನನ್ನ ಜೊತೆಗೆ ಸಂಸಾರ ಮಾಡಲು ಇಷ್ಟವಿಲ್ಲ ಎಂದು ಹೇಳಿದ್ದಳು, ಅದಲ್ಲದೇ ನೀನು ಇನ್ನೊಂದು ಬಾರಿ ನನ್ನನ್ನು ಕರೆಯಲು ಬಂದರೆ ನಿನ್ನ ಮೇಲೆ ಇಲ್ಲಸಲ್ಲದ ಸುಳ್ಳು ಕೇಸ್ ಹಾಕುತ್ತೇನೆ ಎಂದು ಬೆದರಿಸಿದ್ದಳು.

ದಿ.12-08-2023 ರಂದು 4 ಗಂಟೆಯ ಸುಮಾರಿಗೆ 5 ಜನ ಆರೋಪಿತರು ಗುಂಪುಕಟ್ಟಿಕೊಂಡು ಹಲ್ಲೆ ಮಾಡುವ ಉದ್ದೇಶದಿಂದ ನಮ್ಮ ಮನೆಗೆ ಅತಿಕ್ರಮ ಪ್ರವೇಶ ಮಾಡಿದ್ದರು. ಆರೋಪಿತರರು ಎಲ್ಲರೂ ಸೇರಿ ನನ್ನ ತಾಯಿಗೆ ನಿನ್ನಿಂದಲೇ 1ನೇ ಆರೋಪಿಯ ಜೀವನ ಹಾಳಾಗಿದೆ ಎಂದು ಹೇಳಿ ಬೈದು, ಲೇ ಸೂಳೆ ಬಾರಲೇ ಹೊರಗೆ, ಸಂಸಾರ ಹಾಳು ಮಾಡಿದ್ದೀಯಾ ಎಂದು ಬೈದರು. ನಾನು ಅವರಿಗೆ ನನ್ನ ತಾಯಿಗೆ ಏಕೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಿದ್ದೀರಿ ಎಂದು ಕೇಳಿದಾಗ, ಆರೋಪಿತರು ನನ್ನ ತಾಯಿಗೆ ಹೊಡೆದಿದ್ದರು. ನಾನು ಬಿಡಿಸಲು ಹೋದಾಗ ನನ್ನಗೆ 2 & 3ನೇ ಆರೋಪಿತರು ಹೊಡೆದು, ಕೆಡವಿ, ಕಾಲಿನಿಂದ ಒದ್ದಿರುತ್ತಾರೆ. ಆಗ ನನ್ನ ತಾಯಿ ಬಿಡಿಸಲು ಬಂದಾಗ 1. 4 & 5ನೇ ಆರೋಪಿತರು ನನ್ನ ತಾಯಿಯ ತಲೆ ಕೂದಲು ಹಿಡಿದು ಎಳೆದಾಡಿ, ಸೀರೆಯ ಸೆರಗನ್ನು ಹಿಡಿದು ಎಳೆದಾಡಿದ್ದರು. ಅಷ್ಟರಲ್ಲಿ ಚಾಸಾ-3 & 4 ರವರು ಬಂದು ಜಗಳ ನೋಡಿ, ಜಗಳವನ್ನು ಬಿಡಿಸಿರುತ್ತಾರೆ.

ನಂತರ ಆರೋಪಿತರು ಇನ್ನೊಂದು ಸಾರಿ ನಮ್ಮ ಮನೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ನಿಮ್ಮ ತಾಯಿಗೆ ಒದಿಯುತ್ತಿದ್ದಾಗ ಅನಾರೋಗ್ಯದಿಂದ ಬಳಲುತ್ತಿದ್ದ ನಿಮ್ಮ ತಂದೆ ಕೂಗಿಕೊಂಡಾಗ 4 & 5ನೇ ಆರೋಪಿತರು ಅವರಿಗೂ ಸಹ ಕಾಲಿನಿಂದ ಒದ್ದರು ಎಂದರೆ ಸರಿ. 1ನೇ

ಆರೋಪಿ ಮನೆ ಕೆಲಸದ ಸಲುವಾಗಿ ಜಗಳ ತೆಗೆದು ನಮಗೆ ಮಾನಸಿಕ ಹಿಂಸೆ ಕೊಡುತ್ತಿದ್ದರು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ವಿ. ಬಿ. ಆರ್. ಆರೋಪಿ ಪರ ವಕೀಲರಿಂದಃ</u>**

1. ನನ್ನ ಮತ್ತು 1ನೇ ಆರೋಪಿಯದ್ದು ಪ್ರೇಮ ವಿವಾಹ ಎಂದರೆ ಸರಿ. ನಿಮ್ಮ ಮತ್ತು 1ನೇ ಆರೋಪಿಯ ಮದುವೆ ನಿಮ್ಮ ತಂದೆ-ತಾಯಿಗೆ ಇಷ್ಟವಿರಲಿಲ್ಲ ಎಂದರೆ ಸಾಕ್ಷಿಯು ನಾನು ಒಪ್ಪಿಸಿದ್ದೇನೆ, ಮೊದಲು ಅವರಿಗೆ ಇಷ್ಟ ಇರಲಿಲ್ಲ ಎನ್ನುತ್ತಾರೆ.

2. ನೀವು ಖಾಸಗಿ ಪಿರ್ಯಾದಿಯನ್ನು ಯಾವಾಗ ಸಲ್ಲಿಸಿದ್ದು ಎಂದರೆ ಸಾಕ್ಷಿಯು ದಿನಾಂಕ ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ದಿ.08-01-2024 ರಂದು ಖಾಸಗಿ ಪಿರ್ಯಾದಿಯನ್ನು ಹೂಡಿದ್ದರಿ ಎಂದರೆ ಸರಿ. ಘಟನೆಯು ದಿ.12-08-2023 ರಂದು ಆಗಿತ್ತು ಎಂದರೆ ಸರಿ. 4 ತಿಂಗಳ ನಂತರ ನಾನು ಖಾಸಗಿ ಪಿರ್ಯಾದಿ ಸಲ್ಲಿಸಿದ್ದೆ ಎಂದರೆ ಸರಿ. ವಿಳಂಬಕ್ಕೆ ಕಾರಣವೇನು ಎಂದರೆ ಸಾಕ್ಷಿಯು ಆರೋಪಿತರು ರಾಜಕೀಯ ವ್ಯಕ್ತಿಗಳು, ಅವರು ರಾಜಕೀಯ ವ್ಯಕ್ತಿಗಳಿಂದ ಠಾಣೆಗೆ ಕರೆ ಮಾಡಿಸಿ, ನಮ್ಮ ದೂರನ್ನು ಪಡೆಯದಂತೆ ಮಾಡಿಸಿದ್ದರು ಆದ್ದರಿಂದ ವಿಳಂಭ ಆಗಿತ್ತು ಎನ್ನುತ್ತಾರೆ. ನಾನು ಲಿಖಿತ ದೂರನ್ನು ಸಂಬಂಧ ಪಟ್ಟ ಇಲಾಖೆಗೆ ಸಲ್ಲಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ.

3. ಆರೋಪಿತರು 5 ಜನ ಆಟೋ ಮತ್ತು ಕ್ರುಷರ್ ವಾಹನದಲ್ಲಿ ಬಂದಿದ್ದರು. ಆಟೋದಲ್ಲಿ 5 ಜನ, ಕ್ರುಷರ್ ನಲ್ಲಿ 15 ಜನ ಹಿಡಿಯುತ್ತಾರೆ ಎಂದರೆ ಸಾಕ್ಷಿಯು ಸಿದ್ದಪ್ಪ ಕ್ರುಷರ್ ನಲ್ಲಿ ಬಂದಿದ್ದರು, ಉಳಿದ ಆರೋಪಿತರು ಆಟೋದಲ್ಲಿ ಬಂದಿದ್ದರು ಎನ್ನುತ್ತಾರೆ. ಅಂದರೆ ಕ್ರುಷರ್ ನಲ್ಲಿ ಒಬ್ಬರೇ ಬಂದಿದ್ದರಾ ಎಂದರೆ ಸಾಕ್ಷಿಯು ಕ್ರುಷರ್ ನಮ್ಮ ಮನೆಯ ಮುಂದೆ ಬಂದಿರಲಿಲ್ಲ, ದೂರದಲ್ಲಿ ನಿಂತಿತ್ತು ಎನ್ನುತ್ತಾರೆ.

4. ಆರೋಪಿತರ ಬಂದಾಗ ಚಾಸಾ-3, 4 & 7 ರವರು ಎಲ್ಲಿದ್ದರು ಎಂದರೆ ಸಾಕ್ಷಿಯು ಗಲಾಟೆಯ ಶಬ್ದ ಕೇಳಿದ ನಂತರ ಅವರು ಬಂದಿದ್ದರು, ಆದರೆ ಅವರು ಎಲ್ಲಿದ್ದರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ನಮ್ಮ ಮನೆ ಹಳೆ ಬೆಳಗುರ್ಕಿಯಲ್ಲಿದೆ. ಘಟನೆ ಸಂಜೆ 4 ಗಂಟೆಗೆ ನಡೆದಿತ್ತು.

6. ಇಬ್ಬರು ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ನಿಮ್ಮ ಮನೆಯ ಮುಂದೆ ಜಗಳ ಮಾಡುವ ಪ್ರಸಂಗ ಬರುವುದಿಲ್ಲ, ನೀವು ನಿಮ್ಮ ಮೇಲೆ 1ನೇ ಆರೋಪಿ ವರದಕ್ಷಿಣೆ ಕಿರುಕುಳ, ಜೀವನಾಂಶದ ಪ್ರಕರಣಗಳನ್ನು ಹಾಕಿರುವುದರಿಂದ, ನೀವು ಈ ಪ್ರಕರಣ ಹಾಕಿದ್ದೀರಿ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನೀವು ಮೊದಲು ಆರೋಪಿತರೊಂದಿಗೆ ಜಗಳ

ಮಾಡಿದ್ದರಿಂದ, ಅವರು ನಿಮ್ಮ ಮೇಲೆ ಮೊದಲೇ ಕೇಸು ಮಾಡಿದ್ದರು ಎಂದರೆ ಸಾಕ್ಷಿಯು ವಾಸ್ತವ ಅಂಶ ನಾನು ಹೇಳುತ್ತಿದ್ದೇನೆ ಎನ್ನುತ್ತಾರೆ. ಅದರ ಸಂ.3935/2023 ಎಂದರೆ ಸರಿ.

7. ಆರೋಪಿತರು ನಿಮ್ಮ ಮನೆಗೆ ಬಂದಿಲ್ಲ, ಯಾವುದೇ ತಂದೆ-ತಾಯಿ ಮಗಳ ಜೀವನದ ಸಲುವಾಗಿ ಸುಮ್ಮನೆ ಇರುತ್ತಾರೆ, ಅಳಿಯನ ಮನೆಗೆ ಹೋಗಿ ಬಡೆಯುವುದಿಲ್ಲ, ಪ್ರತಿಕಾರಕ್ಕೆಂದು ನೀವು ಸುಳ್ಳು ಪ್ರಕರಣ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**